# ಗೀತೆಯಲ್ಲಿ ಸಂಯಮ

ಸಿ.ಎಸ್. ಮಂಗಳಮ್ಮ

ನಮ್ಮ ಜೀವನದಲ್ಲಿ ಸಂಯಮದ ಮಹತ್ವ ಎಷ್ಟೆಂಬುದನ್ನು ನಮ್ಮ ಅನುಭವಗಳೇ ನಮಗೆ ತೋರಿಸಿಕೊಡುತ್ತವೆ. ಆದರೆ, ಅನೇಕ ಬಾರಿ ಗುಣವನ್ನು ಹೊಂದಲು ಬಹಳ ದೀರ್ಘಕಾಲ ಯತ್ನಿಸಬೇಕಾಗುತ್ತದೆ. ಈ ಕುರಿತು ಗೀತೆ ನೀಡುವ ಒಳನೋಟಗಳು ಅತ್ಯಂತ ಪ್ರಾಯೋಗಿಕವಾಗಿವೆ. ಈ ಬಗ್ಗೆ ಇಲ್ಲಿ ವಿವರಿಸಿರುವ ಲೇಖಕಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಅನೇಕ ಗ್ರಂಥಗಳನ್ನು ರಚಿಸಿರುವ ಅವರು ಈ ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.

ಗೀತೆಯಲ್ಲಿ ಸಂಯಮ? ಸಂಯಮದ ಮೂರ್ತರೂಪವೇ ಭಗವದ್ಗೀತೆ!

ಮಾನ್ಯರಾದ ಡಿ.ವಿ.ಜಿ.ಯವರು ಭಗವದ್ಗೀತೆಯನ್ನು 'ಜೀವನ ಧರ್ಮಯೋಗ' ಎಂದಿದ್ದಾರೆ. ಜನನ-ಮರಣಗಳ ನಡುವಿನ ಕಾಲವೇ ಜೀವನ. ಜೀವನ ಒಂದು ಯಾತ್ರೆ. ಗುರಿ ಮುಟ್ಟಬೇಕಾದರೆ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ನಡೆಯಬೇಕು. ದಾರಿ ಸುಗಮವೇ ಆಗಿರುವುದಿಲ್ಲ. ಹಳ್ಳ-ಕೊಳ್ಳ; ಬಯಲು-ಕಾಡು; ನದಿ-ಮರುಭೂಮಿ ಇತ್ಯಾದಿಗಳನ್ನು ಎದುರಿಸುತ್ತಾ ಸಾಗಬೇಕು. ಸಮಾಧಾನ ಚಿತ್ತದಿಂದ ಮುನ್ನಡೆದಾಗ ಗುರಿಯನ್ನು ತಲುಪಬಹುದು. ಮನುಷ್ಯ ಜೀವನವನ್ನು ನದಿಗೂ ಹೋಲಿಸುವುದುಂಟು. ನದಿಯು ತನ್ನ ಉಗಮಸ್ಥಾನದಿಂದ ಹೊರಟು ನಿಶ್ಚಿತ ಸ್ಥಾನವನ್ನು ತಲುಪುವವರೆಗೂ, ಇಕ್ಕೆಲದಲ್ಲಿನ ಜನ, ಜಾನುವಾರುಗಳಿಗೆ ಸೌಕರ್ಯಗಳನ್ನು ಒದಗಿಸುತ್ತಾ, ಅನ್ನ, ಪಾನಾದಿಗಳನ್ನಿತ್ತು ಸಾಗುತ್ತದೆ. ಇದು ಸಾರ್ಥಕ ಬದುಕೆನ್ನಹುದು. ಆದರೆ ನದಿಯ ಹರಿಯುವಿಕೆಯಲ್ಲಿ ವ್ಯತ್ಯಯವುಂಟಾದಾಗ, ನೆರೆ ಬಂದು ದಡಮೀರಿ ಹರಿದಾಗ ಆಗುವ ಅನಾಹುತಗಳಿಂದ ಲೋಕವೇ ತತ್ತರಿಸಿ ಹೋಗುತ್ತದೆ. ಇದನ್ನು ತಪ್ಪಿಸಲು ಅಲ್ಲಲ್ಲೇ ಅಣೆಕಟ್ಟುಗಳನ್ನು ಕಟ್ಟಿ, ಅನಾಹುತವನ್ನು ತಡೆಗಟ್ಟಬಹುದು. ಇದು ಲೋಕಹಿತಕ್ಕೆ ಸಹಕಾರಿ. ಸ್ವಚ್ಛಂದತೆಗೆ ಕಡಿವಾಣ ಹಾಕಬೇಕು. ಇದು ಜೀವನ ಧರ್ಮ.

'ಧರ್ಮ' ಎಂಬುದರ ವಿವರಣೆಯನ್ನು ಸ್ವಾಮಿ ವಿವೇಕಾನಂದರು ಸರಳವಾಗಿಯೂ, ಸುಲಭವಾಗಿಯೂ ತಿಳಿಸಿದ್ದಾರೆ. ''ಒಳ್ಳೆಯವನಾಗು; ಒಳಿತನ್ನು ಮಾಡು,'' ನ್ಯಾಯ, ನೀತಿ, ಸತ್ಯ, ಧರ್ಮದ ಚೌಕಟ್ಟಿನೊಳಗೆ ಜೀವನ ಸಾಗಬೇಕು. ಆಚರಣೆಯಲ್ಲಿ ತಂದಾಗ ಮಾತ್ರ ಜೀವನದ ಸಾರ್ಥಕತೆ ಎಂಬುದನ್ನೇ ಹಿರಿಯರು ಜಗತ್ತಿಗೆ ತಿಳಿಸಿದ್ದಾರೆ. ನಡೆ-ನುಡಿ ಶುದ್ಧವಾಗಿರಬೇಕು. ನಿತ್ಯಜೀವನದ ಯೋಗವಾಗಬೇಕು. ಸಾಧನೆ ಇಲ್ಲದೆ ಯಾವುದೂ ಸಾಧ್ಯವಿಲ್ಲ. ಸಾಧನೆಗೆ ಬೇಕಾದುದು ಮುಖ್ಯವಾಗಿ 'ಸಂಯಮ'. ಅಂದರೆ ಮನಸ್ಸಿನ ಮೇಲೆ ಹಿಡಿತವಿದ್ದಾಗ ಬಾಕಿ



ಇಂದ್ರಿಯಗಳೂ ಸ್ಥಿಮಿತದಲ್ಲಿರುತ್ತವೆ. ಚಂಚಲ ಮನಸ್ಸಿಗೆ ಕಡಿವಾಣ ಹಾಕುವುದು ಬುದ್ಧಿ! ವಿವೇಚನೆಯಿಂದ ಮನಸ್ಸು ಹತೋಟಿ ತಪ್ಪುವುದಿಲ್ಲ. ಆಮೆ ಮತ್ತು ಮೊಲದ ಕತೆಯನ್ನು ಉದಾಹರಿಸಬಹುದು. ಮೊಲಕ್ಕೆ ತನ್ನ ನಡಿಗೆಯ ವೇಗದ ಮೇಲೆ ಭರವಸೆ ಇತ್ತು ಅಹಂಕಾರವೂ ಇತ್ತು. ಆಮೆ ಯಾವ ಉದ್ವೇಗವೂ ಇಲ್ಲದೆ ಗುರಿಯತ್ತ ಮಾತ್ರ ಗಮನವಿಟ್ಟು ನಡೆಯಿತು. ಮೊಲ ದಾರಿಯ ಮಧ್ಯೆ ವಿಶ್ರಾಂತಿಗಾಗಿ ನಿಂತಿತು. ಮೈಮರೆಯಿತು. ಎಚ್ಚರವಾದಾಗ ಕಂಡಿದ್ದೇನು? ಆಮೆ ಸ್ಪರ್ಧೆಯಲ್ಲಿ ಗೆದ್ದಿದೆ! ಮೊಲದ ಸೋಲಿಗೆ ಕಾರಣ ಅಹಂಕಾರದ ಪ್ರಭಾವ. ನಡಿಗೆಯಲ್ಲಿ ಸ್ಥಿರತೆ ಇರಲಿಲ್ಲ. ಹಾಗೆಯೇ ಜೀವನದಲ್ಲಿ ಪ್ರತಿಕ್ಷಣವೂ ಒಂದಲ್ಲ ಒಂದು ಹೋರಾಟ ಇದ್ದೇ ಇರುತ್ತದೆ. ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು, ವಿವೇಚನೆಯಿಂದ ಎದುರಿಸುವುದೇ ಧರ್ಮ. ಮಾನವ ದಾನವನಾಗಬಾರದು, ದೈವತ್ವಕ್ಕೇರಬೇಕು. ಇದಕ್ಕೆ ನಿಃಸ್ವಾರ್ಥತೆ, ನಿರ್ಮಮತೆ, ನಿರ್ಮೋಹದಿಂದ ಮನಸ್ಸು ಸ್ಥಿತವಾಗಿರುವಂತೆ ಎಚ್ಚರವಿರಬೇಕು.

ಒಂದು ವಸ್ತು ಹಿಡಿಯೊಳಗಿದ್ದಾಗ ಚೆನ್ನಾಗಿರುತ್ತದೆ. ಹಿಡಿತ ಬಿಗಿಯಾದಾಗ ನಾಶವಾಗುವುದು. ಹಿಡಿತ ಸಡಿಲವಾದಾಗ ಕೆಳಗೆ ಬಿದ್ದು ಬೀದಿಪಾಲಾಗುವುದು. ಇದು ಮನುಷ್ಯನಿಗೂ ಅನ್ವಯಿ

ಸುತ್ತದೆ. ಮನಸ್ಸು 'ಸಂಯಮ'ವನ್ನು ಕಾಪಾಡಿಕೊಳ್ಳಬೇಕು; ಅಂದರೆ 'ಆಸೆ' ಎಂಬುದೇ ಎಲ್ಲಕ್ಕೂ ಮೂಲ. ಅದನ್ನು ಹಿಡಿತ ದಲ್ಲಿಟ್ಟುಕೊಂಡರೆ ತಾನೂ ಸುಖಿ. ಸಮಾಜಕ್ಕೂ ಹಿತ. ಇದೇ ಸೂತ್ರ ಹೊಣೆಗಾರಿಕೆಯುಳ್ಳ ವ್ಯಕ್ತಿಗಳಿಗೂ, ಅನ್ವಯಿಸುತ್ತದೆ. ಒಬ್ಬ ರಾಜನ ಧರ್ಮಾಚರಣೆ, ಇಡೀ ರಾಜ್ಯಕ್ಕೆ ಹಾನಿ ಅಥವಾ ಲಾಭವನ್ನುಂಟುಮಾಡುತ್ತದೆ ಎನ್ನುವುದು 'ಭಗವದ್ಗೀತೆ'ಯ ಉತ್ಪತ್ತಿಗೆ ಕಾರಣವಾಗಿದೆ. ಆ ಮೂಲಕ ಜಗತ್ತಿಗೇ ಅಮೂಲ್ಯ ವಾದ ಸಂದೇಶವನ್ನೂ ನೀಡಿದ್ದಾರೆ ವ್ಯಾಸ ಮಹರ್ಷಿಗಳು!

ಸಾಹಿತ್ಯದಿಂದ ಸಮಾಜ ಸುಧಾರಣೆ ಸಾಧ್ಯ. ಸಾಹಿತಿಯಾದ ವನು ಸಮದರ್ಶಿಯಾಗಿದ್ದು ಅಂಕು-ಡೊಂಕು, ತಪ್ಪು-ಒಪ್ಪು ಗಳನ್ನು ತಿಳಿಸಿ, ಸಮಾಜದ ಹಿತಕ್ಕಾಗಿ ಮಾರ್ಗದರ್ಶನ ನೀಡು ತ್ತಾನೆ. ಎಚ್ಚರಿಸಿ, ಮುನ್ನಡೆಯುವಂತೆ ಕೈದೀವಿಗೆಯಾಗುತ್ತಾನೆ. ವ್ಯಾಸ ಮಹರ್ಷಿಗಳು 'ಮಹಾಭಾರತ'ದ ರಚನಕಾರರು. ಹಸ್ತಿನಾ ಪುರದ ರಾಜವಂಶದ ಕಥೆಯನ್ನು ಬರೆದಿದ್ದಾರೆ. ಇದು ಕೇವಲ ಮನರಂಜನೆಗಾಗಿಯಲ್ಲ. ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯವಾಗಿಯೂ ಒಂದು ನೀತಿ ಸಂಹಿತೆಯಾಗಿದೆ. ಮಾನವ ಜೀವನದ ದಾರಿ ಹೇಗಿರಬೇಕು ಎಂಬುದನ್ನು ವಿವರ ವಾಗಿ ತಿಳಿಸಿದ್ದಾರೆ. ಧರ್ಮ-ಅಧರ್ಮಗಳ ಹೋರಾಟದಲ್ಲಿ 'ಧರ್ಮಕ್ಕೆ ಜಯ' ವೆಂಬುದನ್ನು ದೃಢಪಡಿಸಿದ್ದಾರೆ. ಮಹಾ ಭಾರತದ ಮಧ್ಯಭಾಗದಲ್ಲಿ 'ಭಗವದ್ಗೀತೆ' ಯನ್ನು ವಿವರಿಸಿ ದ್ದಾರೆ. ಇದು 'ಜೀವನ ಧರ್ಮಯೋಗ' ಇದನ್ನು ಪ್ರಾರಂಭ ದಲ್ಲಿಯೋ, ಕೊನೆಯಲ್ಲಿಯೋ ಬರೆಯಬಹುದಾಗಿತ್ತಲ್ಲವೆ? ಎಂದು ಯೋಚಿಸಿದಾಗ, ಹೀಗೂ ಊಹಿಸಬಹುದು. ಸ್ವಚ್ಛಂದ ವಾಗಿ ನಡೆಯುವ ಆನೆಗೆ 'ಅಂಕುಶ'ವಿರಬೇಕು. ಅದರಿಂದ ಮುಂದಾಗುವ ಅನಾಹುತಗಳನ್ನು ತಡೆಯಬೇಕು. ಇದು ಸಮಾ ಜದ ಹಿತದೃಷ್ಟಿಯಿಂದ ಆಗಬೇಕು. ಆ ಮಹತ್ಕಾರ್ಯವನ್ನು 'ಭಗವದ್ಗೀತೆ'ಯ ಮೂಲಕ ನೆರವೇರಿಸಿದ್ದಾರೆ.

ಭಗವದ್ಗೀತೆಯ ಮೊದಲನೆ ಶ್ಲೋಕ ಧೃತರಾಷ್ಟ್ರನ ಪ್ರಶ್ನೆ ಯಿಂದ ಪ್ರಾರಂಭವಾಗುತ್ತದೆ. ಅದಕ್ಕೆ ಉತ್ತರವನ್ನು ಸಂಜಯ ನೀಡುತ್ತಿದ್ದಾನೆ. ಈ ಪ್ರಸಂಗ ಯುದ್ಧಭೂಮಿಯಲ್ಲಿ ನಡೆದದ್ದು. ಈ ಯದ್ಧಕ್ಕೆ ಕಾರಣವೇನು? ಸ್ವಾರ್ಥ! ಆಸೆ! ಹಿಡಿತವಿಲ್ಲದ ಮನಸ್ಸು ಇತ್ಯಾದಿ ಧರ್ಮವಿರುದ್ಧವಾದ ಕಾರಣಗಳು. ವಿಶೇಷ ವಾಗಿ 'ಮನಸ್ಸಿನ ಹಿಡಿತ'ಕ್ಕೆ ಕಡಿವಾಣ ಹಾಕದೇ ಸ್ವೇಚ್ಛೆಯಾಗಿ ಬಿಟ್ಟದ್ದು. ಇದರ ಹಿನ್ನೆಲೆಯನ್ನು ಸ್ಥೂಲವಾಗಿ ನೋಡೋಣ. ಹಸ್ತಿನಾಪುರದ ಅರಸ ಧೃತರಾಷ್ಟ್ರ. ಅಂಧ. ತಮ್ಮನಾದ ಪಾಂಡು ವಿನ ನೆರವಿನಿಂದ ರಾಜ್ಯಾಡಳಿತ ನಡೆಯುತ್ತಿದೆ. ಧೃತರಾಷ್ಟ್ರನ ಮನಸ್ಸಿನಲ್ಲಿ ಅತೃಪ್ತಿ-ಆಸೆ ಇರುವುದು ಸ್ವಾಭಾವಿಕ. ಆದರೆ ಅದು ಧರ್ಮಕ್ಕೆ ವಿರೋಧವಾಗಿ ಮುಳ್ಳುಕಂಟಿಯಂತೆ ಬೆಳೆಯತೊಡಗಿ ದಾಗ ಚಿವುಟಿ ಹಾಕಲಿಲ್ಲ. ಇದಕ್ಕೆ ಗೊಬ್ಬರ ಹಾಕಿ ಬೆಳೆಸಿದವಳು ಗಾಂಧಾರಿ. ತರುಣಿ, ರಾಜಕುಮಾರಿ ಅನಿವಾರ್ಯವಾಗಿ ಅಂಧ ಮಹಾರಾಜನನ್ನು ವರಿಸಬೇಕಾಯಿತು. ಒಡಲೊಳಗಿನ ಕಿಚ್ಚು ಹೊಗೆಯಾಡತೊಡಗಿತು. ಪಾಂಡು ಮಹಾರಾಜ ತನ್ನದೇ ಆದ ತಪ್ಪಿಗಾಗಿ ರಾಜ್ಯವನ್ನು ಧೃತರಾಷ್ಟ್ರನಿಗೇ ವಹಿಸಿ ವನವಾಸಿಯಾದ. ಆಪದ್ಧರ್ಮವನ್ನು ಅನುಸರಿಸಿ ದೇವತೆಗಳ ಕೃಪೆಯಿಂದ ಇಬ್ಬರು ಹೆಂಡತಿಯರಲ್ಲಿ ಐದು ಮಕ್ಕಳನ್ನು ಪಡೆದ. ಒಂದು ದಿನ ಇಂದ್ರಿಯಚಾಪಲ್ಯಕ್ಕೆ ವಶನಾಗಿ ಋಷಿಯ ಶಾಪದಂತೆ ಮರಣ ವನ್ನು ಹೊಂದಿದ. ದಿಕ್ಕು ತಪ್ಪಿದ ಅವನ ಕುಟುಂಬ ಪುನಃ ಹಸ್ತಿನಾಪುರಕ್ಕೆ ಬಂದಿತು. ಇದು ಅಂಧ ಮಹಾರಾಜನ ಮಕ್ಕಳಾದ ಕೌರವರಿಗೆ ಅಸಹನೀಯವಾಯಿತು. ಕೌರವರ ಹುಟ್ಟು ಗಾಂಧಾ ರಿಯ ಮತ್ಸರದ ಫಲ ಒಂದಕ್ಕೆ ನೂರಾಗಿ ಬೆಳೆದಿತ್ತು. ಗಾಂಧಾ ರಿಯ ಕ್ರೋಧ ಹಿಡಿತ ತಪ್ಪಿ, ತನ್ನ ಗರ್ಭದೊಳಗಿನ ಪಿಂಡವನ್ನು ಕಿತ್ತೊಗೆಯಿಸಿತು. ಅವೇ ನೂರು ಮಕ್ಕಳಾಗಿ ಬೆಳೆದು, ಆ ತಾಯಿಯ ಗುಣವನ್ನೇ ಹಂಚಿಕೊಂಡು ಬೆಳೆದಿದ್ದರು. ಜೊತೆಗೆ ಧೃತರಾಷ್ಟ್ರನ ಪುತ್ರ ವ್ಯಾಮೋಹವೂ ಕೂಡಿತ್ತು. ಮನಸ್ಸನ್ನು ಹಿಡಿತದಲ್ಲಿ ಇಟ್ಟು ಕೊಳ್ಳದ ಸ್ವಾರ್ಥದ ಫಲಿತಾಂಶದಿಂದ ಸಮಾಜಕ್ಕೆ ಒಳಿತನ್ನು ಹೇಗೆ ಬಯಸಬಹುದು?

ಪಾಂಡುವಿನ ಮಕ್ಕಳು ತಂದೆ-ತಾಯಿಯರಂತೆ ಧರ್ಮ ಮಾರ್ಗದಲ್ಲಿ ಬೆಳೆದವರು. ತಮ್ಮ ಹಕ್ಕಿನಲ್ಲಿ ವಿಶ್ವಾಸವಿಟ್ಟು ಬಂದ ಪಾಂಡವರಿಗೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನ-ಮಾನಗಳಿಗೆ ಬದಲಾಗಿ ದ್ವೇಷ, ಮತ್ಸರಗಳು ಕಾಡತೊಡಗಿದವು. ವಿಶೇಷವಾಗಿ



ಭೀಮ-ದುರ್ಯೋಧನರ ನಡುವಿನ ಮತ್ಸರದಿಂದಾಗಿ ರಾಜ್ಯ ದಲ್ಲಿ ಶಾಂತಿ ಕದಡಿತು. ಕೌರವರ ಅಧರ್ಮ-ಪಾಂಡವರ ಧರ್ಮದ ಸ್ಪರ್ಧೆ ಎಂಬಂತೆ ಇತ್ತು ಹಸ್ತಿನಾಪುರದ ರಾಜ್ಯಾಡಳಿತ. ಕೌರವರ ಅನೀತಿಗೆ ಕಡಿವಾಣ ಹಾಕುವವರೇ ಇಲ್ಲದಂತಾಗಿ (ಹಿರಿಯರು ಹೇಳಿದ ಮಾತಿಗೂ ಬೆಲೆ ಕೊಡದೆ) ಪಾಂಡವರು

ಪಡಬಾರದ ಕಷ್ಟಗಳನ್ನೆಲ್ಲ ಪಟ್ಟರು. ಪ್ರತಿಯೊಂದು ಘಟನೆಗಳಲ್ಲಿಯೂ ವಿಜಯಿಗಳಾದರು. ಕಡೆಗೆ ರಾಜ್ಯ-ಕೋಶಗಳನ್ನೂ ಕಳೆದುಕೊಂಡು ವನವಾಸಿಗಳಾದರು. ಶಪಥದಂತೆ ಪೂರೈಸಿ, ತಮ್ಮ ಪಾಲಿನ ರಾಜ್ಯಕ್ಕಾಗಿ ಹೋರಾಡಲೇಬೇಕಾದ ಪರಿಸ್ಥಿತಿಯೊದಗಿತು. ಆಗ ದುರ್ಯೋಧನ 'ಯುದ್ಧದಲ್ಲಿ ಗೆದ್ದು ರಾಜ್ಯವನ್ನು ಪಡೆಯಲಿ' ಎಂದ ಕಾರಣ ಕುರುಕ್ಷೇತ್ರದಲ್ಲಿ ಎರಡೂ ಕಡೆಯ ಸೇನೆಯು ಸಜ್ಜಾಯಿತು. 'ಅಂಕೆ ಇಲ್ಲದ ಕಪಿ ಲಂಕೆ ಸುಟ್ಟ' ಹಾಗಾಯಿತು. ಕೌರವರ ಹಿಡಿತವಿಲ್ಲದ, ಸ್ವಾರ್ಥ, ಮತ್ಸರ, ದ್ವೇಷಗಳೇ ಈ ಯುದ್ಧಕ್ಕೆ ಕಾರಣವೆನ್ನಬಹುದಾದರೂ ಇದರ ಬೀಜ ಧೃತರಾಷ್ಟ್ರ-ಗಾಂಧಾರಿಗಳ ನಿಯಂತ್ರಣವಿಲ್ಲದ ನಡೆ.

ವ್ಯಾಸ ಮಹರ್ಷಿಗಳು ಮಹಾಭಾರತದಲ್ಲಿ ಈ ಅನೀತಿ, ಅಧರ್ಮದ ಬೆಳವಣಿಗೆ, ಸಮಾಜಕ್ಕೆ ಅಹಿತವೆಂದು ಕಡಿವಾಣ ಹಾಕಿದ್ದಾರೆ ಸಮಾಜದ ಹಿತಕ್ಕಾಗಿ ಕಥೆಗೆ ತಿರುವು ಕೊಟ್ಟಿದ್ದಾರೆ. ಧೃತರಾಷ್ಟ್ರನಿಗೆ ಮನಸ್ಸಿನಲ್ಲಿ ತಲ್ಲಣವಾಗುತ್ತದೆ. ಯುದ್ಧದಲ್ಲಿ ತನ್ನ ಮಕ್ಕಳಿಗೆ ಏನಾಗುವುದೋ ಎಂದು. ಅರಮನೆಯಲ್ಲಿ ಚಿಂತಾಕ್ರಾಂತನಾಗಿದ್ದಾನೆ. ವ್ಯಾಸರು ಪ್ರತ್ಯಕ್ಷವಾದರು. ಎಷ್ಟಾದರೂ ತಮ್ಮದೇ ಸಂತಾನವಲ್ಲವೇ? ಸಮಾಧಾನಪಡಿಸಬೇಕಾಗಿದೆ. ಆದರೆ ಸ್ವಾರ್ಥಿಗಳಲ್ಲ! ಬಂದು ದಾರಿ ತೋರಿಸಿದರು. ''ಮಹಾರಾಜ, ಯುದ್ಧಭೂಮಿಯಲ್ಲಿ ನಡೆಯುವುದನ್ನೆಲ್ಲ ವಿವರವಾಗಿ ನಿನಗೆ ತಿಳಿಸಲು ಸಂಜಯನಿಗೆ ವಿಶೇಷ ವರವನ್ನು ಕರುಣಿಸುತ್ತೇನೆ, ಅಲ್ಲಿನ ದೃಶ್ಯವನ್ನೆಲ್ಲ ವಿವರಿಸುತ್ತಾನೆ'' ಎಂದು ಸಾಂತ್ವನದ ಮಾತು ಹೇಳಿ, ಅದೃಶ್ಯರಾದರು.

ಭಗವದ್ಗೀತೆಯ ಪಠಣ, ಪಾಠಣ, ಶ್ರವಣಗಳನ್ನು ಸ್ಥಿರಚಿತ್ತದಿಂದ ಮಾಡಬೇಕೆಂದು ಗೀತಾ ಫಲಶ್ರುತಿಯಲ್ಲಿ ತಿಳಿಸಿದೆ. ಭಗವದ್ಗೀತೆಯಲ್ಲಿ ಬರುವ ಪಾತ್ರಗಳು ನಾಲ್ಕು. ಧೃತರಾಷ್ಟ್ರ-ಸಂಜಯ; ಅರ್ಜುನ-ಶ್ರೀಕೃಷ್ಣ. ಸಂಜಯ ಸ್ಥಿರ ಚಿತ್ತ. ತನ್ನದೆಂಬುದಾಗಿ ಯಾವ ಮಾತೂ ಇಲ್ಲ. ಕರ್ತವ್ಯನಿಷ್ಠುರ, ಯಜಮಾನನ ನಿಸ್ಪೃಹ ಪರಿಚಾರಕ. ಶುದ್ಧಮನಸ್ಸಿನವನು. ಧೃತರಾಷ್ಟ್ರ ಸಂಜಯನನ್ನು ಪ್ರಶ್ನೆ ಕೇಳುವ ಮೂಲಕ ಭಗವದ್ಗೀತೆಯನ್ನು ಪ್ರಾರಂಭಿಸಿದ್ದಾರೆ. ವ್ಯಾಸ ಮಹರ್ಷಿಗಳು ''**ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ । ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥**'' ಧೃತರಾಷ್ಟ್ರನ ಮನಸ್ಸು ಹಿಡಿತದಲ್ಲಿಲ್ಲ. ಈ ಯುದ್ಧಕ್ಕೆ ಮೂಲ ಕಾರಣ ತಾನು ಎಂಬುದು ಮನಸ್ಸಿನೊಳಗೆ ಚುಚ್ಚುತ್ತಲೇ ಇದೆ. ಸ್ವಾರ್ಥದ ಮನಸ್ಸಿಗೆ ವಿವೇಚನೆಯ ಕಡಿವಾಣ ಹಾಕದೇ ವ್ಯಾಮೋಹದಲ್ಲಿ ಮುಳುಗಿದ ಕಾರಣವೇ ಇಂದಿನ ದುಃಸ್ಥಿತಿಗೆ ಕಾರಣ. ಈಗಲೂ 'ಮಾಮಕಾಃ' ಎನ್ನುವ ಮಾತಿನಲ್ಲಿ ಆ ವ್ಯಾಮೋಹ ಎದ್ದು ಕಾಣುತ್ತಿದೆ. ಮನಸ್ಸು ಹಿಡಿತ ತಪ್ಪಿದಾಗ ಬುದ್ಧಿಯೂ ಮಂಕಾಗಿ ದಿಕ್ಕು ಕಾಣದಂತೆ ಆಗುತ್ತದೆ. ಅಂತಹ ಸ್ಥಿತಿಯಲ್ಲಿ ಯಾರಾದರೊಬ್ಬರನ್ನು ಆಶ್ರಯಿಸಿ, ಪರಿಹಾರವನ್ನು ಕಾಣಲು ಬಯಸುತ್ತದೆ. ಇಲ್ಲಿ ಸಂಜಯನನ್ನು ಆಶ್ರಯಿಸಿದ್ದಾನೆ.

ಕುರುಕ್ಷೇತ್ರದ ವಿವರಣೆ ನೀಡುತ್ತಿದ್ದಾನೆ: 'ದುರ್ಯೋಧನನು ದ್ರೋಣಾಚಾರ್ಯರಿಗೆ ತಮ್ಮ ಸೈನ್ಯದ ವಿವರಣೆ ತಿಳಿಸುತ್ತಾ, ಸೇನಾಪತಿಗಳಾದ ಭೀಷ್ಮರನ್ನು ನೀವುಗಳು ರಕ್ಷಿಸಿ, ಪಾಂಡವರ ಕಡೆಯೂ ವೀರಾಧಿವೀರರಿದ್ದಾರೆ. ಭೀಮ ಪರಾಕ್ರಮಿ' ಎಂದು. ಇಲ್ಲಿ ದುರ್ಯೋಧನ ವಿಶೇಷವಾಗಿ ಭೀಮನ ಹೆಸರನ್ನೇ ಹೇಳುವುದರ ಕಾರಣ-ಇವರಿಬ್ಬರ ನಡುವಿನ ಮತ್ಸರವೇ ಇರಬಹುದು. ದುರ್ಯೋಧನನಿಗೆ ತನ್ನ ಅನ್ಯಾಯ, ಅಧರ್ಮಗಳು ಚುಚ್ಚುತ್ತಿರಬಹುದು. ಸಂಜಯ ಮುಂದುವರಿಸುತ್ತಿದ್ದಾನೆ. 'ಭೀಷ್ಮರು ಶಂಖನಾದ ಮಾಡಿದರು. ರಣವಾದ್ಯಗಳೂ ಮೊಳಗಿದವು. ಜೊತೆಗೆ,

**ಪಾಂಚಜನ್ಯಂ ಹೃಷಿಕೇಶೋ ದೇವದತ್ತಂ ಧನಂಜಯಃ ।**
**ಪೌಂಡ್ರಂ ದಧ್ಮೌ ಮಹಾಶಂಖಂ ಭೀಮಕರ್ಮಾ ವೃಕೋದರಃ ॥**
**ಅನಂತ ವಿಜಯಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।**
**ನಕುಲಃ ಸಹದೇವಶ್ಚ ಸುಘೋಷ ಮಣಿಪುಷ್ಪಕೌ ॥**

— ಶತ್ರುಗಳ ಹೃದಯ ಕಂಪಿಸುವಂತಿತ್ತು ಆ ಧ್ವನಿಗಳು.''

ಈ ಆರು ಶಂಖಗಳ ಹೆಸರಿನ ಮೂಲಕ ಮೂಲಕ ಜಗದ್ರಕ್ಷಕನಾದ ಶ್ರೀಕೃಷ್ಣ, ಸಮಾಜಕ್ಕೆ ಹುಣ್ಣಿನಂತೆ ಬೆಳೆದಿರುವ ಅಧರ್ಮದ ನಾಶವನ್ನು ದೈವಶಕ್ತಿ, ಸ್ಥೈರ್ಯ, ಧರ್ಮ ಪರಿಶುದ್ಧತೆ, ನ್ಯಾಯದಲ್ಲಿ ಮೃದುತ್ವವಿಲ್ಲದ, ಕಠೋರತೆಯಿಂದ ಖಂಡಿಸಿ ಧರ್ಮ ಸ್ಥಾಪನೆ ಮಾಡುತ್ತಾನೆ' ಎಂಬುದನ್ನು ವ್ಯಾಸರು ಘೋಷಿಸಿರುವುದು ವಿಶೇಷ.

ರಣರಂಗದ ವಿವರಣೆ ನೀಡುತ್ತಿದ್ದಾನೆ, ''ಇನ್ನೇನು ಎರಡೂ ಸೈನ್ಯಗಳ ಮಧ್ಯೆ ರಥವನ್ನು ನಿಲ್ಲಿಸು. ಯಾರೊಡನೆ ಯುದ್ಧ ಮಾಡಬೇಕೋ ನೋಡುತ್ತೇನೆ.'' ಇಲ್ಲಿ ನಾವು ಅರ್ಜುನನ ಮಾತಿನ ಧಾಟಿಯನ್ನು ಗಮನಿಸಿದರೆ, ತನ್ನ ಪರಾಕ್ರಮದ ಬಗ್ಗೆ 'ಅಹಂ' ಇರುವಂತಿದೆ. ಶ್ರೀಕೃಷ್ಣನನ್ನು ಹಿಂದೆ ಕೇಳಿದ 'ನೀನೊಬ್ಬ ನನ್ನ ಜೊತೆಗಿದ್ದರೆ ಸಾಕು. ನಿನ್ನ ಕೃಪೆಯಿಂದ ಗೆಲ್ಲುತ್ತೇನೆ' ಎಂಬ ಮಾತನ್ನೂ ಅವನು ಮರೆತಂತಿದೆ. ಇದು ಮನಸ್ಸಿನ ಚಂಚಲತೆಯ ಅಹಂ! ಶ್ರೀಕೃಷ್ಣ ರಥದ ಕುದುರೆಗಳ ಲಗಾಮನ್ನು ಹಿಡಿದು, ಕುಳಿತು ರಥವನ್ನು ನಡೆಸಿ ಸೇನೆಯ ಮಧ್ಯದಲ್ಲಿ ತಂದು ನಿಲ್ಲಿಸಿದ. ಅರ್ಜುನ, ರಥದಲ್ಲಿ ಗಾಂಡೀವವನ್ನು ಹಿಡಿದು ನಿಂತಿದ್ದಾನೆ. ಎರಡೂ ಕಡೆಯೂ ದೃಷ್ಟಿ ಹಾಯಿಸುತ್ತಿದ್ದಾಗ, ಅವನ ಮನಸ್ಸಿನಲ್ಲಿ ಮೂಡಿದ ಭಾವನೆ, 'ಇವರೆಲ್ಲರೂ ಬಂಧುಗಳು, ಆಪ್ತರು, ನೆಂಟರು. ಇವರನ್ನೆಲ್ಲ ಕೊಲ್ಲಬೇಕು. ಇದು ಸರಿಯಲ್ಲ. ಪಾಪದ ಕೆಲಸ. ಇದರಿಂದ ಸಾಮಾಜಿಕ ವ್ಯವಸ್ಥೆಯೂ ಕುಸಿಯುತ್ತದೆ' ಎಂಬ ಮೃದುಭಾವನೆ ಮಮತೆಯೊಂದಿಗೆ ಸೇರಿ, ಮನಸ್ಸು ಹಿಡಿತ ತಪ್ಪಿ, ಬುದ್ಧಿ ವಿವೇಕವನ್ನು ಕಳೆದುಕೊಂಡಿತು. ಮನಸ್ಸು ಅಸ್ವಸ್ಥವಾದಾಗ ಶರೀರವೂ ಸ್ವಸ್ಥತೆಯನ್ನು ಕಳೆದುಕೊಳ್ಳುತ್ತದೆ. ಅರ್ಜುನ ಕರ್ತವ್ಯವನ್ನೇ ಮರೆತ. ನಿಲ್ಲಲಾರದೇ ಕುಸಿದು ಕುಳಿತು 'ಕೃಷ್ಣಾ, ನಾನು ಯುದ್ಧ ಮಾಡಲಾರೆ' ಎಂದು ಹೇಳಿದ.



ಶ್ರೀಕೃಷ್ಣ, ರಥಿಕನ ಆದೇಶಕ್ಕಾಗಿ ಕಾದುಕುಳಿತಿದ್ದ. ಆದರೆ ಈಗ ಕಿವಿಗೆ ಬಿದ್ದ ಮಾತು ಅನಿರೀಕ್ಷಿತವಾದದ್ದು. ತಿರುಗಿ ನೋಡು ತ್ತಾನೆ, ಅರ್ಜುನ ಅತ್ಯಂತ ದೈನ್ಯಾವಸ್ಥೆಯಲ್ಲಿದ್ದಾನೆ. ಶ್ರೀಕೃಷ್ಣ ಅವತರಿಸಿರುವುದು ಧರ್ಮಸಂಸ್ಥಾಪನೆಗಾಗಿ, ಅಧರ್ಮ ಖಂಡನೆ ಗಾಗಿ, ಅದಕ್ಕಾಗಿ ಅರ್ಜುನನ್ನು ಎಳೆತಂದಿದ್ದಾನೆ. ಆದರೆ ಇಲ್ಲಿ ತಿರುವು ಮುರುವಾಗಿದೆ. ಅದನ್ನು ಸರಿಪಡಿಸುವುದು ತನ್ನ ಕರ್ತವ್ಯ ಎಂದು ಭಾವಿಸಿ ಇಂತಹ ವಿಷಮ ಪರಿಸ್ಥಿತಿಯಲ್ಲಿ ಏನಾಯಿತು ನಿನಗೆ? ಎಂದು ಸಾವಧಾನದಿಂದ ಕೇಳುತ್ತಾನೆ. ಕದಡಿದ ಮನಸ್ಸಿಗೆ ಯಾವ ಬೋಧನೆಯೂ ಹಿಡಿಸುವುದಿಲ್ಲ. ತಿಳಿಯಾದ ನೀರಿನಲ್ಲಿ ಪ್ರತಿ ಬಿಂಬ ಸ್ಪಷ್ಟವಾಗಿ ಕಾಣಿಸುತ್ತಿದೆ. ಅದಕ್ಕಾಗಿ ಶ್ರೀಕೃಷ್ಣ ಸಮಚಿತ್ತತೆ ಯಿಂದ ಕೇಳುತ್ತಿದ್ದಾನೆ. ಆತ್ಮೀಯತೆ ಇದ್ದಲ್ಲಿ ಅಂತರಾಳದ ಮಾತನ್ನು ನಿರ್ಭಯವಾಗಿ ಹೇಳಬಹುದಲ್ಲವೆ? ಧೃತರಾಷ್ಟ್ರನ ವಿಚಲಿತ ಮನಸ್ಸನ್ನು ಮೊದಲು ವ್ಯಾಸರು ಹದಗೊಳಿಸಿ, ನಂತರ ಸಂಜಯನ ಮೂಲಕ ರಣರಂಗದ ವಿವರಣೆ ತಿಳಿಸುತ್ತಾರೆ.

ಈಗ ಅರ್ಜುನ, ತನ್ನ ಮನಸ್ಸಿನಲ್ಲಿ ಉಂಟಾದ ಭಾವನೆ ಯನ್ನು ತಿಳಿಸುತ್ತಾ 'ಇದು ಪಾಪದ ಕೆಲಸ, ಭಿಕ್ಷೆ ಬೇಡಿದರೂ ಪರವಾಗಿಲ್ಲ. ಈ ರಕ್ತಸಿಕ್ತ ರಾಜ್ಯ ಬೇಡ. ನನ್ನ ಮನಸ್ಸು ದಿಕ್ಕು ತೋಚದಂತಾಗಿದೆ. ನಾನೇನು ಮಾಡಬೇಕೆಂದು ತಿಳಿಯುತ್ತಿಲ್ಲ. ನಿನಗೆ ಶರಣು ಬಂದಿದ್ದೇನೆ. ದಾರಿ ತೋರಿಸು' ಎಂದಾಗ ಅರ್ಜುನನ ಮಾರ್ದವತೆ ಒಪ್ಪಿಗೆಯಾಗಲಿಲ್ಲ. ಏಕೆಂದರೆ ಈ ಯುದ್ಧ ದಾಯಾದಿಗಳ ಕಲಹವಾದರೂ, ಅದರ ಹಿಂದೆ ಅಧ ರ್ಮದ ಖಂಡನೆ, ಧರ್ಮಸಂಸ್ಥಾಪನೆ ಶ್ರೀಕೃಷ್ಣನ ಅವತಾರದ ಉದ್ದೇಶವಾಗಿತ್ತು. ಈ ಚಂಚಲ ಮನಸ್ಸು ಸತ್ಕಾರ್ಯಕ್ಕೆ ಅಡ್ಡಿ ಯಾಗಿದೆ. ಧೃತರಾಷ್ಟ್ರನ ಮೋಹದಿಂದ ಬೆಳೆದಿದ್ದ ಅಧರ್ಮ ದಿಂದ ಸಮಾಜಕ್ಕೇ ರೋಗ ಬಡಿದಂತಾಗಿದೆ. ಅದನ್ನು ತಡೆಗಟ್ಟ ದಿದ್ದರೆ ಸರ್ವನಾಶ ಖಚಿತ. ಅರ್ಜುನನ 'ಬಂಧು ಮೋಹ ದಿಂದ'ಲೂ ಸಮಾಜಕ್ಕೆ ಹಾನಿಯಾಗುವುದು. ರೀತಿ ಬೇರೆ, ಫಲಿ ತಾಂಶ ಒಂದೇ. ಇದು ಮಾನವ ಧರ್ಮವಲ್ಲ. ದೇಹಕ್ಕೆ ಬಂದ ಹುಣ್ಣನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಲೇಬೇಕು. ಅದರಿಂದ ಕೆಲವು ಸಜ್ಜನತೆಗಳಿಗೂ ತೊಂದರೆ ಆಗುವುದು ಸಹಜ. ಒಂದು ಕೆರೆ ಕಟ್ಟಬೇಕಾದರೆ ಕೆಲವು ಗಿಡಗಳು ನಾಶವಾಗುತ್ತವೆ. ಬಹುಜನ ಹಿತಕ್ಕಾಗಿ ಇದು ಅನಿವಾರ್ಯ. ಅನಂತರ ಪುನಃ ಬೆಳೆಸಲು ಅವಕಾಶವಿದೆ. ವ್ಯಕ್ತಿಗಿಂತ ಸಮಾಜದ ಕಲ್ಯಾಣ ಮುಖ್ಯ. ಅದ ಕ್ಕಾಗಿ ಶ್ರೀಕೃಷ್ಣ, ಅರ್ಜುನನ ಮನಸ್ಸು ಪರಿವರ್ತನೆ ಆಗುವಂತೆ, ಕರ್ತವ್ಯದ ಕಡೆ ಗಮನ ಕೊಡುವಂತೆ ಬೋಧಿಸಿದ್ದೇ 'ಭಗವ ದ್ಗೀತೆ' 'ಸಂಯಮ ಗೀತೆ' ! ಇಲ್ಲಿಂದ ಪ್ರಾರಂಭವಾಗುತ್ತದೆ ಬೋಧನೆ.

ಶ್ರೀಕೃಷ್ಣ ಎದ್ದು ನಿಂತಿದ್ದಾನೆ. ಕುದುರೆಗಳ ಲಗಾಮು ಕೈ ಯಲ್ಲಿ ಹಿಡಿದಿದ್ದಾನೆ. ಬೆದರಿಕೆ ಇಲ್ಲ ಉದಾಸೀನತೆ ಇಲ್ಲ, ಉದ್ವೇಗವಿಲ್ಲ, ಅರ್ಜುನನ ಸಂದೇಹಗಳಿಗೆ ಪರಿಹಾರದ ಸೂತ್ರ ವನ್ನು ತಿಳಿಸುತ್ತಿದ್ದಾನೆ. ಮೊಟ್ಟ ಮೊದಲನೆಯದಾಗಿ 'ಈ ಜಗತ್ತಿನ ಸೃಷ್ಟಿಗೆ ಮೂಲ ಕಾರಣ ಪರಮಾತ್ಮ! 'ತೃಣಮಪಿ ನ ಚಲತಿ ತೇನ ವಿನಾ' ಜಗನ್ನಾಟಕ ಸೂತ್ರಧಾರಿ ಆ ಪರಾಶಕ್ತಿ. ನಾವು ಕಾಣು ತ್ತಿರುವ ಜಗತ್ತು ಆ 'ಶಕ್ತಿ'ಯ ಸೃಷ್ಟಿ. ಸೃಷ್ಟಿಯ ಪ್ರತಿಯೊಂದ ರಲ್ಲಿಯೂ ಆ ದಿವ್ಯಶಕ್ತಿ ಅಡಗಿದೆ. ಪ್ರಕೃತಿ ಅಥವಾ ಜಗತ್ತು ಶಾಶ್ವತವಲ್ಲ. **'ಜಾತಸ್ಯ ಮರಣಂ ಧ್ರುವಂ'**. ಜನನ-ಮರಣ ಗಳು ದೈವಾಧೀನವಾದದ್ದು. ಸಕಲ ಜೀವರಾಶಿಗಳಲ್ಲಿ ಮನುಷ್ಯ ನಿಗೆ ಮಾತ್ರ ಯೋಚನಾ ಶಕ್ತಿ ಇದೆ. ಆದ್ದರಿಂದ ಅವನು ಜನ್ಮ ಸಾರ್ಥಕತೆ ಪಡೆಯಬೇಕಾದರೆ ಜೀವನದಲ್ಲಿ ಒಂದು ಸದುದ್ದೇಶ ವಿಟ್ಟುಕೊಂಡು 'ಧರ್ಮ'ವನ್ನು ಮೀರದೆ ನಡೆಯತಕ್ಕದ್ದು. ಆದರೆ ಈ ಶರೀರದಲ್ಲಿ 'ಮನಸ್ಸು' ಎಂಬುದೊಂದಿದೆ. ಶರೀರದಲ್ಲಿ ಎಲ್ಲಿದೆ ಎಂದು ಹುಡುಕುವುದಕ್ಕಿಂತ, ಶರೀರವೆಲ್ಲಾ ವ್ಯಾಪಿಸಿಕೊಂಡಿದೆ ಎನ್ನಬಹುದು. ಇದು ಶರೀರ, ಇಂದ್ರಿಯಗಳ ಮೇಲೆ ತನ್ನ ಹಿಡಿತವನ್ನಿಟ್ಟುಕೊಂಡಿದೆ. ಇದು ಚಂಚಲವಾದದ್ದು. ಅದನ್ನು ಮನುಷ್ಯ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳದಿದ್ದರೆ, ಸ್ವೇಚ್ಛೆಯಾಗಿ ಬಿಟ್ಟುಬಿಟ್ಟರೆ 'ಧರ್ಮ'ದ ಹಾದಿ ತಪ್ಪಿಹೋಗುತ್ತದೆ. ಆಗಬಾರ ದ್ದೆಲ್ಲ ಆಗಿ ಹೋಗುತ್ತದೆ. ಆದರೆ ಆ ಪರಾಶಕ್ತಿ ಇದನ್ನು ತಡೆ ಹಿಡಿಯುವುದಕ್ಕೆ 'ಬುದ್ಧಿ' ಎಂಬ ಅಂಕುಶವನ್ನು ಶರೀರದ ಉತ್ತಮಾಂಗದಲ್ಲಿಯೇ ಇರಿಸಿದ್ದಾನೆ. ಅಲ್ಲಿ ವಿವೇಚನಾ ಶಕ್ತಿ ಯಿಂದ ಮನಸ್ಸಿನ ಹೊಯ್ದಾಟವನ್ನು ತಡೆಗಟ್ಟಿ, ದಾರಿ ಮುಂದು ವರಿಸಬಹುದು. ಈ ಹಿಡಿತವೇ 'ಸಂಯಮ' ಒಳಿತು-ಕೆಡಕುಗಳ ಹೋರಾಟಕ್ಕೆ ಇದರಿಂದಲೇ ಪರಿಹಾರ ಸಿಗುವುದು.

ಸದುದ್ದೇಶದಿಂದ ಮಾಡುವ ಕಾರ್ಯಗಳು ತನಗೂ-ಜಗತ್ತಿಗೂ ಕಲ್ಯಾಣಕಾರಿಗಳು. ಸ್ವಸ್ಥ ಶರೀರದಿಂದ ಉತ್ತಮ ಕಾರ್ಯಗಳು ಮಾಡಲು ಸಾಧ್ಯವಾಗುತ್ತದೆ. ಮನಸ್ಸು ಸ್ವಸ್ಥವಾಗಿದ್ದರೆ, ಶರೀರವೂ ಆರೋಗ್ಯವಾಗಿರುತ್ತದೆ. 'ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳವಿಲ್ಲ.' ಇದೇ ಪ್ರಮುಖವಾದದ್ದು. ಇಲ್ಲಿ ಊಟ ಎಂದರೆ ಕೇವಲ ಹಸಿವನ್ನು(ಹೊಟ್ಟೆ) ತಣಿಸುವ ಆಹಾರವಲ್ಲ. ಇಂದ್ರಿಯಗಳಿಗೆಲ್ಲಾ ಹಾಕುವ ಆಹಾರ. ಅದು ಮನಸ್ಸಿನ ಕಾರ್ಯವಾದ್ದರಿಂದ, ಮನಸ್ಸಿಗೆ ಕಡಿವಾಣ ಹಾಕುತ್ತಿರಲೇಬೇಕು. ಒಂದು ಒಳ್ಳೆಯ ಕೆಲಸ ಮಾಡುವಾಗ ನಾನಾ ರೀತಿಯ ಅಡ್ಡಿಗಳೂ, ಆಕಾಂಕ್ಷೆಗಳೂ ಸಾಲು-ಸಾಲಾಗಿ ಎದುರಾಗುತ್ತವೆ. 'ಗುರಿ'ಯತ್ತ ಗಮನವಿರಿಸಿಕೊಂಡು, ಯಾವುದಕ್ಕೂ ತಗ್ಗದೆ, ಬಾಗದೆ, ಬೀಗದೆ ಸಮಚಿತ್ತತೆಯಿಂದ ಸಾಗಿದಾಗ ಮಾತ್ರ ಗುರಿ ತಲುಪಬಹುದು. ಆಸೆ, ಕ್ರೋಧ, ಲೋಭಗಳಿಗೆ ವಶನಾಗಬಾರದು. ದಂಡಿನಲ್ಲಿ ಸೋದರಮಾವನೇ? ನೆಂಟಸ್ತನದ ಮೋಹ ಬಹಳ ಅಪಾಯಕಾರಿ. ಸುಖವಾಗಲೀ, ದುಃಖವಾಗಲೀ ಕರ್ತವ್ಯದ ಕಡೆ ಗಮನವಿರಬೇಕೇ ವಿನಾ, ಮನಸ್ಸು ಸಡಿಲವಾಗಬಾರದು.



ಶರೀರದಲ್ಲಿ ಒಂದು ಹುಣ್ಣು ಎದ್ದಾಗ, ಅದರಿಂದ ಸುತ್ತಮುತ್ತಲಿನವರಿಗೂ ಸೋಂಕು ಉಂಟಾಗುವ ಸಂಭವವುಂಟು. ಅದನ್ನು ಕತ್ತರಿಸಲೇಬೇಕು. ಅಲ್ಲಿ ಮೃದುತ್ವವಿರಬಾರದು. ಆ ಸಮಯದಲ್ಲಿ ಶರೀರಕ್ಕೆ ನೋವಾಗಬಹುದು. ಸಹಿಸಿಕೊಂಡು, ಒಳತಿಗಾಗಿ ಚಿಕಿತ್ಸೆ ಮಾಡುವುದೇ ಧರ್ಮಮಾರ್ಗ. ಮಾಡುವ ಪ್ರತಿ ಕೆಲಸವೂ ನಿಸ್ಪೃಹತೆಯಿಂದ ಕೂಡಿರಬೇಕಾದರೆ, ಮನಸ್ಸಿನಲ್ಲಿ ಸ್ವಾರ್ಥವಿರಬಾರದು. ಎಲ್ಲವೂ ಭಗವದಧೀನವೆಂಬ ನೆನಹು ಇದ್ದಾಗ ಮಾತ್ರ ಇದು ಸಾಧ್ಯ. ಸೃಷ್ಟಿಯಲ್ಲಿನ ಪ್ರತಿ ವಸ್ತುವೂ ಭಗವದಂಶವೆಂಬ ಭಾವನೆಯಿಂದ ಕೆಲಸ ಮಾಡಿದಾಗ ಅದು 'ಯಜ್ಞ' (ಪವಿತ್ರ) ವಾಗುತ್ತದೆ. ಆ ಭಗವಂತನ ಇರುವು ನಮ್ಮಲ್ಲಿಯೇ ಇದೆ. ಅಂತಹ ಪವಿತ್ರಕ್ಷೇತ್ರವಾದ ಶರೀರದಲ್ಲಿ ಧರ್ಮವಿರೋಧಿ ಚಟುವಟಿಕೆಗಳಿಗೆ ಅವಕಾಶ ಕೊಡಬಾರದು. ಮನಸ್ಸಿನಲ್ಲಿ ಏಳುವ ಆಸೆ, ಆಕಾಂಕ್ಷೆಗಳಿಗೆ ಹೊಸ ತಿರುವನ್ನು ಕೊಡಬೇಕು. 'ಯಾವುದೂ ನನ್ನದಲ್ಲ, ಎಲ್ಲವೂ ಭಗವಂತನದು' ಎಂಬ ನಿರ್ಮಮತೆ ಇದ್ದಾಗ, ಮಾಡುವ ಕೆಲಸ ಭಗವತ್ಸೇವೆ ಆಗುತ್ತದೆ. ಇದಕ್ಕಾಗಿ ಮನಸ್ಸನ್ನು ಸಜ್ಜುಗೊಳಿಸಬೇಕು. ಆಸೆಗೆ ಅಂಕುಶ ಹಾಕಿದಾಗ ಸೇವೆಯ ಧನ್ಯತೆ ಗೋಚರಿಸುತ್ತದೆ.

ದಾರಿ ತಪ್ಪಿದಾಗ, ದಾರಿ ದೀಪವಾಗುವವರು ಹಿರಿಯರು, ಶಾಸ್ತ್ರಗಳು, ಅನುಭಾವಿಗಳು. ಅವರ ನಡೆ-ನುಡಿಯಂತೆ ಸಾಗಿದರೆ ಕತ್ತಲಳಿದು ಬೆಳಕು ಮೂಡುತ್ತದೆ. ಇಂತಹ ಮಾರ್ಗದರ್ಶಿಗಳೇ ಭಗವತ್ಸ್ವರೂಪರು. 'ಸಂಕಟ ಬಂದಾಗ ವೆಂಕಟರಮಣ'ನೇ ಮನಸ್ಸಿನಲ್ಲಿ ಮೊದಲು ಕಾಣುವವನು. ಹೀಗೆ ಜೀವನ ಧರ್ಮವನ್ನು ಅನುಸರಿಸಬೇಕಾದರೆ 'ಮನಸ್ಸೇ' ಕಾರಣ. ಅದನ್ನು ಹಿಡಿತದಲ್ಲಿಟ್ಟುಕೊಂಡಾಗ ಸದುದ್ದೇಶ ನೆರವೇರುವುದು. ನಮ್ಮ ದೈನಂದಿನ ಪ್ರತಿ ಕಾರ್ಯದಲ್ಲಿಯೂ ಸಮಚಿತ್ತತೆ ಇರಬೇಕು.

ಇದನ್ನು ಆಚರಣೆಗೆ ತರಬೇಕಾದರೆ ಸುಲಭಮಾರ್ಗವನ್ನು ಗೀತಾಕಾರರು ತಿಳಿಸಿದ್ದಾರೆ. ನಾವು ಒಂದು ವ್ರತವನ್ನು ಮಾಡುವಾಗ ಪ್ರಾರಂಭದಲ್ಲಿ ನಿರ್ವಿಘ್ನವಾಗಿ ನೆರವೇರಬೇಕೆಂದು ವಿಘ್ನೇಶ್ವರನನ್ನು ಪ್ರಾರ್ಥಿಸಿ, ನಂತರ ವ್ರತವನ್ನು ಸಾಂಗವಾಗಿ ಮಾಡಿ, ಕೊನೆಯಲ್ಲಿ ಫಲಸಮರ್ಪಣೆ ಮಾಡುತ್ತೇವೆ. ಹಾಗೂ ಪೂಜಾ ವಿಧಾನದಲ್ಲಿ ನ್ಯೂನತೆಗಳಾಗಿದ್ದರೆ ಕ್ಷಮಿಸು ಎಂದು ಪ್ರಾಯಶ್ಚಿತ್ತಾರ್ಥವಾಗಿ ಮಂತ್ರಹೇಳಿ, ಕಾಯಾ, ವಾಚಾ, ಮನಸಾ ಮಾಡುವ ಬುದ್ಧಿ, ಪ್ರಕೃತಿಯ ಸಹಜ ಸ್ವಭಾವಗಳಿಂದ ಆಗಿರುವುದನ್ನು ನಿನ್ನ ಚರಣಗಳಿಗೆ ಅರ್ಪಿಸುತ್ತೇನೆ ಎಂದು ಹೇಳುತ್ತೇವೆ. ಈ ಜೀವನವೂ ಒಂದು ವ್ರತ. ಅದು ನಿರ್ವಿಘ್ನವಾಗಿ ನೆರವೇರುವುದಕ್ಕೆ ಅಡ್ಡಿಯಾಗುವ ಒಳ್ಳೆಯ ಕೆಡುಕುಗಳು ಭಗವಂತನಿಗೆ ಸೇರಿದ್ದು ಎಂದು ಶುದ್ಧಮನಸ್ಸಿನಿಂದ ನಡೆಯಬೇಕು, ಎಂಬ ಭಾವನೆಯನ್ನು ಶ್ರೀಕೃಷ್ಣ, ಅರ್ಜುನನಿಗೆ ಮನದಟ್ಟಾಗುವಂತೆ ತಿಳಿಸಿದ್ದೇ ಭಗವದ್ಗೀತೆ! ಮುಖ್ಯವಾದ ವಿಷಯ ಮನಸ್ಸಿನ 'ಸಂಯಮ'!

ಧೃತರಾಷ್ಟ್ರನಿಂದ ಕೇಳಲ್ಪಟ್ಟ ಪ್ರಶ್ನೆಗೆ, ಹಿನ್ನೆಲೆಯಾಗಿ ಮನಸ್ಸಿಗೆ ಕಡಿವಾಣ ಹಾಕದಿದ್ದಾಗ ಆದ ಅನಾಹುತ(ಸಮಾಜ ಕಂಟಕ)ಕ್ಕೆ, ಇದು ಉತ್ತರ. ಮೋಹದಿಂದ ಹಿಡಿತ ತಪ್ಪಿದ ಮನಸ್ಸಿಗೆ ಸ್ಥಿರತೆಯನ್ನು ಕಳೆದುಕೊಂಡ ಅರ್ಜುನನಿಗೆ ಶ್ರೀಕೃಷ್ಣನ ಚಿಕಿತ್ಸೆ ಯಶಸ್ವಿಯಾಯಿತು. ಅರ್ಜುನ ಈಗ ಗಾಂಡೀವ ಹಿಡಿದು ಎದ್ದು ನಿಂತಿದ್ದಾನೆ. ವ್ಯಾಮೋಹದ ಕತ್ತಲು ಅಳಿದಿದೆ.

ಭಗವದ್ಗೀತೆಯ ಕೊನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನ ಅಭಯವಾಣಿ ಸಾರ್ವತ್ರಿಕವಾದ್ದು. ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಲು ನಾನಾ ರೀತಿಯ ಸಾಧನೆಗಳನ್ನು ತಿಳಿಸಿದ ನಂತರ, ತನ್ನ

ಸಂತಾನವನ್ನು ಯಾವುದೇ ರೀತಿಯಲ್ಲಾದರೂ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿ, ಜೀವನ ಧರ್ಮವನ್ನು ಪಾಲಿಸಿ ಮುಕ್ತರಾಗಲೆಂಬ ಉದ್ದೇಶದಿಂದ,

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।**
**ಅಹಂತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥**

– ಭಗವಂತನನ್ನು ಸ್ಮರಿಸುತ್ತಾ ಮಾಡುವ ಕೆಲಸವೆಲ್ಲ ಅವನಿಗೇ ಸೇರಿದ್ದು ಎಂಬ ಶುದ್ಧಭಾವನೆಯೆಂದು ಮನಸ್ಸಿನಲ್ಲಿ ಇರುವಂತೆ, ಸದುದ್ದೇಶದಿಂದ ಬಾಳಿದರೆ, ಜೀವನದ ಸುಖ-ದುಃಖಗಳನ್ನು ದಾಟಿಸುತ್ತಾನೆ.

ಶ್ರೀರಾಮಕೃಷ್ಣರ ಜೀವನದಲ್ಲಿನ ಉದಾಹರಣೆಗಳು:

ಜೀವನ ಧರ್ಮದಲ್ಲಿ ಹಿಡಿತವಿಲ್ಲದೆ ಹಳಿತಪ್ಪಿದ ಗಾಡಿಯಾಗಿದ್ದ ಗಿರೀಶಚಂದ್ರಘೋಷನು ತನ್ನದೆನ್ನುವುದನ್ನು ತಡೆಗಟ್ಟಲಾಗದೆ ಶ್ರೀರಾಮಕೃಷ್ಣರಿಗೆ ವಕಾಲತ್ತನ್ನು ವಹಿಸಿದ. 'ಇದೇನು ಮಹಾ' ಎಂಬ ಧೋರಣೆ ಇತ್ತು. ಆದರೆ ಬರುಬರುತ್ತಾ ಮನಸ್ಸು ಬದಲಾಯಿತು, ಶ್ರೀರಾಮಕೃಷ್ಣರೆಂಬ ಅಂಬಿಗ ಅವನನ್ನು ದಡ ಮುಟ್ಟಿಸಿದರು.'ಶ್ರೀಮಂತನ ಮನೆಯ ದಾಸಿಯಂತಿರಬೇಕು ಸಂಸಾರದಲ್ಲಿ' ಎನ್ನುತ್ತಾರೆ ಶ್ರೀರಾಮಕೃಷ್ಣರು. ತನ್ನದೆನ್ನುವುದು ಯಾವುದೂ ಇಲ್ಲ. ಇಲ್ಲಿ ಕೇವಲ ನೌಕರಿಗಾಗಿ ಬಂದಿದ್ದೇನೆ ಎಂಬ ನಿರ್ಮಮತೆ ಇರಬೇಕು. ಮತ್ತೊಂದು ಕಥೆ ಹೇಳುತ್ತಾರೆ. 'ಭತ್ತ ಕುಟ್ಟುವ ಹೆಂಗಸು ಅನೇಕ ವಿಧದ ವ್ಯವಹಾರಗಳನ್ನು ನಡೆಸುತ್ತಿದ್ದರೂ ತನ್ನ ಕೈಮೇಲೆ ಏತದ ಪೆಟ್ಟು ಬೀಳದಂತೆ ಎಚ್ಚರಿಕೆಯಿಂದ ಇರುತ್ತಾಳೆ' ಎಂದು ಅಂದರೆ ಮನಸ್ಸು ಹಿಡಿತಕ್ಕೆ ಸಿಗದಿದ್ದಾಗ, ಭಗವಂತನನ್ನು ಶರಣುಹೊಕ್ಕರೆ ಖಂಡಿತವಾಗಿಯೂ ಅವನು ಬಾಳಿನ ಬೆಳಕಾಗಿ ರಕ್ಷಿಸುತ್ತಾನೆ.

ಭಕ್ತಿಭಂಡಾರಿ ಬಸವಣ್ಣನವರ ವಚನವೂ, ಜೀವನಧರ್ಮ ಹೇಗಿರಬೇಕೆಂಬುದನ್ನು ತಿಳಿಸುತ್ತದೆ. 'ಹೊತ್ತಾರೆ ಎದ್ದು ಅಗ್ಗವಣೆ ಪತ್ತರೆಯ ತಂದು, ಹೊತ್ತು ಹೋಗದ ಮುನ್ನ ತೊತ್ತುಗೆಲಸವ ಮಾಡು'. ಜೀವನ ನಶ್ವರ, ಭಗವಂತನ ಕೆಲಸವೆಂದು ದೈನಂದಿನ ಕೆಲಸಗಳನ್ನು ಮಾಡಬೇಕು. ಹೇಗೆಂದರೆ 'ತೊತ್ತುಗೆಲಸ? ಸೇವಕನೆಂಬ ಭಾವನೆಯಿಂದ, ಎಲ್ಲ ಜೀವರಾಶಿಗಳಲ್ಲಿಯೂ ದೇವನಿದ್ದಾನೆ, ಮಾಡುವ ಕೆಲಸವೆಲ್ಲವೂ ಶಿವ ಸೇವೆ' ಎಂಬ ಭಾವನೆಯೊಂದಿಗೆ 'ಹೊತ್ತು ಹೋಗುವ ಮುನ್ನ' ಕಾಲನ ಬರುವಿಕೆಗೆ ನಿಶ್ಚಿತವಾದ ಸಮಯವಿಲ್ಲ. ಈ ಶರೀರ ಅಳಿಯುವ ಮುನ್ನ ಭಗವತ್ಸೇವಕನೆಂಬುದಾಗಿ ಅರಿತು ಸೇವೆ ಮಾಡು. ''ಜೀವ-ಶಿವರಲ್ಲಿ ಭೇದವಿಲ್ಲ; ಜೀವಸೇವೆ-ಶಿವಸೇವೆ''.

ಹರಿದಾಡುವ ಮನಸ್ಸಿಗೆ ಸಂಯಮವಿಲ್ಲದಿದ್ದರೆ ಸ್ವಚ್ಛಂದತೆಯಿಂದ ಸಿಕ್ಕಲ್ಲಿ ಹರಿದು ಜೀವನ ಛಿದ್ರ-ಛಿದ್ರವಾಗುತ್ತದೆ. ಭಗವದ್ಗೀತೆಯ ಪ್ರಾರಂಭದಲ್ಲಿ ಹೇಳಿರುವಂತೆ ಕುರುಕ್ಷೇತ್ರವಾಗುತ್ತದೆ ಧರ್ಮಕ್ಷೇತ್ರ! ಧರ್ಮಕ್ಷೇತ್ರದಲ್ಲಿ ನಿಂತು ಜಗತ್ತಿನಲ್ಲಿ ಅಧರ್ಮ ಖಂಡಿಸಲು ಸಿದ್ಧವಾಗುವುದು ಕರ್ತವ್ಯ ಅದು ಸಮಾಜಕ್ಕೂ ಹಿತವಾದದ್ದು. ಅಲ್ಲಿ ವ್ಯಾಮೋಹದ ಸೋಂಕು ಅಂಟಿದಾಗಲೂ ಧರ್ಮಕ್ಷೇತ್ರ ಕುರುಕ್ಷೇತ್ರವಾಗುವುದು ಖಂಡಿತ! ಮನಸ್ಸಿಗೆ ಕಡಿವಾಣದ ಅವಶ್ಯಕತೆಯಿದೆ. ಶ್ರೀಕೃಷ್ಣ ಗೀತೆಯಲ್ಲಿ ಸಾರಿರುವುದು ಇದನ್ನೆ ವ್ಯಾಸ ಮಹರ್ಷಿಗಳು ಭಗವದ್ಗೀತೆಯಲ್ಲಿ ವ್ಯಕ್ತಿ-ಸಮಾಜ ಎರಡೂ ದೃಷ್ಟಿಯಿಂದ ಬೋಧನೆ ಮಾಡಿದ್ದಾರೆ. ವ್ಯಕ್ತಿಗತವಾದ ಮೋಹ ಅರ್ಜುನನದು. ದೂರದೃಷ್ಟಿಯಿಂದ ನೋಡಲಿಲ್ಲ.

**ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯು ತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥**
**ಪರಿತ್ರಾ ಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ।**
**ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥**

— ಲೋಕಹಿತ ವ್ಯಕ್ತಿಗಿಂತ ಸಮಾಜ ಮುಖ್ಯ ಎಂಬ ವಿಶಾಲ ಮನೋ ಭಾವನೆಗಾಗಿ ಮನಸ್ಸು ಚಿಂತಿಸಬೇಕು. ಅದಕ್ಕಾಗಿ ಧರ್ಮವನ್ನು ಮರೆತ ಅರ್ಜುನನಿಗೆ ಪುನಃ ಗಾಂಡೀವವನ್ನು ಹಿಡಿದು ಹೋರಾಡಲು, ಸಂಯಮದ ಚಿಕಿತ್ಸೆ ನೀಡಿದ್ದು. ಇದೇ ವಿವರಣೆ. ಸಂಜಯನು ವೀಕ್ಷಕನಾಗಿ ಧೃತರಾಷ್ಟ್ರನ ಪ್ರಶ್ನೆಗೆ ಉತ್ತರವಾಗಿ ನೀಡಿರುವುದು. ಇದು ರಣರಂಗದ ಹೊರಗಡೆ. ಅಂದರೆ ಜಗತ್ತಿನ ಎಚ್ಚರಿಕೆಗಾಗಿ; ಹಾಗೂ ಮುಂದೆ ರಣಭೂಮಿಯಲ್ಲಿ ನಡೆಯುವ ಭೀಕರ ದೃಶ್ಯಗಳನ್ನು ಕೇಳುವಾಗ ಧೃತರಾಷ್ಟ್ರನಿಗೆ ಸಮಚಿತ್ತತೆಯಿಂದ ಮನಸ್ಸು ಇರಬೇಕೆಂಬ ಕಿವಿ ಮಾತು ಎನ್ನಬಹುದು.

ಭಗವದ್ಗೀತೆ 'ಬಾಳಿನ ಬೆಳಕು' ನಿಜ. ಆ ಬೆಳಕನ್ನು ನಮ್ಮ ಜೀವನದಲ್ಲಿಯೂ ಉಪಯೋಗಿಸಿಕೊಳ್ಳುವುದು ಧರ್ಮವಾಗಬೇಕು. ದೀಪದ ಬೆಳಕಿನಲ್ಲಿ ಸುಳ್ಳುಪತ್ರಕ್ಕೆ ರುಜು ಹಾಕುವ ಕೆಲಸ ನಮ್ಮಿಂದ ಆಗದಂತೆ ನಡೆದುಕೊಳ್ಳಬೇಕು. ಇದು ಶ್ರೀಕೃಷ್ಣನ 'ಸಂಯಮ ಗೀತೆ'ಯ ಸಂದೇಶ.

ವ್ಯಾಸರು ಭಗವದ್ಗೀತೆಯ ಕಡೆಯ ಶ್ಲೋಕದಲ್ಲಿ ತಮ್ಮದೆ ಆದ ಭರತವಾಕ್ಯವನ್ನು ಜಗತ್ತಿಗೆ ಕರುಣಿಸಿದ್ದಾರೆ. ''ಯತ್ರ ಯೋಗೇಶ್ವರ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ । ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ॥'' ಜಗನ್ನಾಯಕನಾದ ಶ್ರೀಕೃಷ್ಣ, ಹಾಗೂ ಧನುರ್ಧಾರಿಯಾದ ಅರ್ಜುನ ಇರುವಲ್ಲಿ ಸಕಲ ಸನ್ಮಂಗಳಗಳುಂಟಾಗಿ ವಿಜಯ ಪತಾಕೆ ಹಾರಾಡುವುದರಲ್ಲಿ ಸಂಶಯವಿಲ್ಲ.

'ಜೀವನ ಧರ್ಮಯೋಗ'ವಾದ ಭಗವದ್ಗೀತೆಯನ್ನು ಸಾವಧಾನ ಚಿತ್ತದಿಂದ ಜೀವನದಲ್ಲಿ ಅಳವಡಿಸಿಕೊಂಡಲ್ಲಿ, ಶ್ರೀಕೃಷ್ಣ ಪರಮಾತ್ಮ ಮಾರ್ಗದರ್ಶನ ಮಾಡುತ್ತಾನೆ. ದಾರಿಯಲ್ಲಿ ಬರುವ ಅಡೆ-ತಡೆಗಳನ್ನು ಅರ್ಜುನ ನಿವಾರಿಸಿ ಗುರಿಯನ್ನು ತಲುಪಿಸುತ್ತಾನೆ ಎಂಬುದೇ 'ಗೀತೆಯಲ್ಲಿ ಸಂಯಮ'ದ ವಿಶೇಷತೆ. ಜಗತ್ತಿಗೇ 'ಬಾಳಿನ ಬೆಳಕು' ಶ್ರೀಮದ್ಭಗವದ್ಗೀತೆ।